ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಆನಂದತೀರ್ಥ ದ್ವಾದಶ ಸ್ತೋತ್ರ ಪಾರಾಯಣೆ

ಹರಿಯೇ ಸರ್ವೋತ್ತಮ. ಲೋಕದ ಜೀವರಾಶಿಗಳೆಲ್ಲಾ ಶ್ರೀಹರಿಗೆ ಅಧೀನ. ಭಕ್ತಿಯೇ ಮುಕ್ತಿಗೆ ಸಾಧನ ಎಂಬ ದಿವ್ಯೋಪದೇಶ ನೀಡಿದ ಶ್ರೀಮಧ್ವಾಚಾರ್ಯರು ಹರಿ ಸರ್ವೋತ್ತಮ ಸಿದ್ಧಾಂತವನ್ನು ಜನಪ್ರಿಯಗೊಳಿಸಿದ ನಿತ್ಯ - ಅಪರೋಕ್ಷ - ಜ್ಞಾನಿ. ಪೂರ್ಣಪ್ರಜ್ಞರು, ಆನಂದ ತೀರ್ಥರೆಂದು ಪ್ರಸಿದ್ಧರಾಗಿದ್ದ ಶ್ರೀಮಧ್ವರು ಕಲಿಯುಗದ ಜನರನ್ನು ಸನ್ಮಾರ್ಗ ಪ್ರವರ್ತಕರನ್ನಾಗಿಸಿ ಮೋಕ್ಷವನ್ನು ಗಳಿಸಲು ಸರಳವೂ ಸುಲಭವೂ ಆದ ಮಾರ್ಗವನ್ನು ಕೊಡುವುದರಲ್ಲಿ ನೆರವಾಗುವಂಥ ಅನುಪಮ ಕೃತಿಗಳನ್ನು ರಚಿಸಿ ಮಹೋಪಕಾರ ಮಾಡಿದ್ದಾರೆ. ಸಾಕ್ಷಾತ್ ಹನುಮದೇವರ ಅವತಾರವೆಂದು ಪ್ರಸಿದ್ಧವಾದ ಶ್ರೀಮಧ್ವಾಚಾರ್ಯರ ಅವತಾರವು ಲೋಕದಲ್ಲಿ ಭಗವದ್ಭಕ್ತಿಯನ್ನೂ ತನ್ಮೂಲಕ ಮೋಕ್ಷವನ್ನು ಹೊಂದಬೇಕೆಂಬ ಉಪನಿಷತ್ತುಗಳ ಆಶಯವನ್ನು ಸಾರುವಲ್ಲಿ ಶ್ರುತಿ - ಸ್ಮೃತಿ ಪುರಾಣಗಳಲ್ಲಿ ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದೆ.

ಬುದ್ಧಿಬಲ, ಯಶಸ್ಸು, ಧೈರ್ಯ, ನಿರ್ಭಯತ್ವ, ಅರೋಗತ, ಅಜಾಡ್ಯ, ವಾಕ್ಪಟುತ್ವ ಮುಂತಾದವುಗಳ ಸಿದ್ಧಿಯು ಶ್ರೀಮಧ್ವರ ಕೃತಿಗಳ ಪಾರಾಯಣೆಯಿಂದ ಉಂಟಾಗುತ್ತದೆ ಎಂಬುದು ಹಿರಿಯರ ನುಡಿ. ಶ್ರೀಮಧ್ವರ ಅತ್ಯಂತ ಜನಪ್ರಿಯ ಕೃತಿ **"ದ್ವಾದಶ ಸ್ತೋತ್ರ".** ಭಗವಾನ್ ಶ್ರೀಹರಿ ಮತ್ತು ಪರಮಾತ್ಮನ ವಿಭಿನ್ನ ಅಭಿವ್ಯಕ್ತಿಗಳ ಸ್ತುತಿ.

ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಂ ।
ಇಂದಿರಾಪತಿ ಮಾದ್ಯಾದಿ ವರದೇಶ ವರಪ್ರದಮ್ ॥

ಎಂಬ ಮಂಗಳಾಚರಣೆಯಿಂದ,

ಆನಂದ ಚಂದ್ರಿಕಾ ಸ್ಪಂದನ ವಂದೇ । ಆನಂದತೀರ್ಥ ಪರಾನಂದ ವರದ ॥

ಎಂದು ಮುಕ್ತಾಯಗೊಳ್ಳುವ ದಿವ್ಯ ಸ್ತುತಿ. ಭಕ್ತಿ, ಆಧ್ಯಾತ್ಮಿಕ, ಬುದ್ಧಿವಂತಿಕೆಗೆ ಅದ್ಭುತವಾದ ಸಂಶ್ಲೇಷಣೆ.

ಅಜ ಏಕಾದಶಿಯ ಈ ಪರ್ವದಿನದಂದು ನಮ್ಮ ನಾದಾರ್ಚನೆಯ ತಂಡ ಶ್ರೀಮಧ್ವರ ದ್ವಾದಶ ಸ್ತೋತ್ರ ಪಾರಾಯಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಅಜ್ಞಾನವೆಂಬ ಮನಸ್ಸಿನ ಅಂಧಕಾರವನ್ನು ಹೋಗಲಾಡಿಸುವ, ಪ್ರಜ್ವಲಿಸುವ ಸೂರ್ಯನಂತಿರುವ ಶ್ರೀಹರಿಯ ದಿವ್ಯ ಚರಣಾರವಿಂದಗಳಿಂದ ಆರಂಭಿಸಿ, ಶ್ರೀಮಧ್ವರು, ಶ್ರೀಮಹಾಲಕ್ಷ್ಮಿಯು ವಿರಾಜಮಾನವಾಗಿರುವ ತೊಡೆ, ವಾಸಸ್ಥಾನವಾಗಿರುವ ಎದೆ, ಶಂಖ ಚಕ್ರ ಗದಾ ಪದ್ಮಗಳಿಂದ ಶೋಭಿಸುತ್ತಿರುವ ಬಾಹುಗಳು, ಕೌಸ್ತುಭ ಮಣಿಯಿಂದ ಅಲಂಕರಿಸಲ್ಪಟ್ಟ ಕೊರಳು, ಕಮಲದಂತಹಾ ಮುಖ,

ಕರುಣಾಮಯ ನೋಟದಿಂದ ಶೋಭಿಸುತ್ತಿರುವ ಶ್ರೀಹರಿಯ ಆನಂದದ ಮೂರ್ತರೂಪದ ಭೌತಿಕ ವಿವರಣೆ ನೀಡುತ್ತಾರೆ. ಸರ್ವದಾ ನಾರಾಯಣನ ಸ್ಮರಣೆಯು ಅಂತ್ಯಕಾಲದಲ್ಲಿ ಪರಮಾತ್ಮನನ್ನು ನೆನೆಯುವ ಸೌಭಾಗ್ಯವನ್ನು ನೀಡುತ್ತದೆ ಎಂಬ ದಿವ್ಯ ಸಂದೇಶವನ್ನು ಹೊತ್ತ ಮೊದಲನೆಯ ಅಧ್ಯಾಯ.

ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ |
ಇಂದಿರಾಪತಿ ಮಾದ್ಯಾದಿ ವರದೇಶ ವರಪ್ರದಮ್ ॥ ೧ ॥
ನಮಾಮಿ ನಿಖಿಲಾಧೀಶ ಕಿರೀಟಾ ಘೃಷ್ಟ ಪೀಠವತ್ |
ಹೃತ್ತಮಃ ಶಮನೇಽರ್ಕಾಭಂ ಶ್ರೀಪತೇಃ ಪಾದ ಪಂಕಜಮ್ ॥೨॥
ಜಾಂಬೂನದಾಂಬರಾಧಾರಂ ನಿತಂಬಂ ಚಿಂತ್ಯ ಮೀಶಿತುಃ |
ಸ್ವರ್ಣ ಮಂಜೀರ ಸಂವೀತಮ್ ಆರೂಢಂ ಜಗದಂಬಯಾ ॥ ೩ ॥
ಉದರಂ ಚಿಂತ್ಯ ಮೀಶಸ್ಯ ತನುತ್ವೇಽಪ್ಯ ಅಖಿಲಂ ಭರಮ್ |
ವಲಿತ್ರ ಯಾಂಕಿತಂ ನಿತ್ಯಮ್ ಉಪ ಗೂಢಂ ಶ್ರೀಯೈಕಯಾ ॥ ೪ ॥
ಸ್ಮರಣೀಯಮ್ ಉರೋ ವಿಷ್ಣೋರ್ ಇಂದಿರಾವಾಸಮ್ ಈಶಿತುಃ |
ಅನಂತಮ್ ಅಂತ ವದಿವ ಭುಜಯೋರ್ ಅಂತರಂಗತಮ್ ॥ ೫ ॥
ಶಂಖ ಚಕ್ರ ಗಧಾ ಪದ್ಮ ಧರಾಶ್ಚಿಂತ್ಯಾ ಹರೇರ್ಭುಜಾಃ |
ಪೀನವೃತ್ತಾ ಜಗದ್ರಕ್ಷಾ ಕೇವಲೋದ್ಯೋಗಿನೋಽ ನಿಶಮ್ ॥ ೬ ॥
ಸಂತತಂ ಚಿಂತಯೇತ್ ಕಂಠಂ ಭಾಸ್ವತ್ ಕೌಸ್ತುಭ ಭಾಸಕಮ್ |
ವೈಕುಂಠಸ್ಯ ಅಖಿಲಾ ವೇದಾ ಉದ್ಗೀರ್ಯಂತೇಽ ಅನಿಶಂ ಯತಃ ॥ ೭ ॥
ಸ್ಮರೇತ್ ಯಾಮಿನೀನಾಥ ಸಹಸ್ರಾಮಿತ ಕಾಂತಿಮತ್ |
ಭವತಾಪಾಪ ನೋದೀಡ್ಯಂ ಶ್ರೀಪತೇ ಮುಖ ಪಂಕಜಮ್ ॥ ೮ ॥
ಪೂರ್ಣಾನನ್ಯ ಸುಖೋದ್ಭಾಸಿ ಮಂದಸ್ಮಿತಮ್ ಅಧೀಶಿತುಃ |
ಗೋವಿಂದಸ್ಯ ಸದಾ ಚಿಂತ್ಯಂ ನಿತ್ಯಾನಂದ ಪದ ಪ್ರದಮ್ ॥ ೯ ॥
ಸ್ಮರಾಮಿ ಭವ ಸಂತಾಪ ಹಾನಿದಾಮೃತ ಸಾಗರಮ್
ಪೂರ್ಣಾನಂದಸ್ಯ ರಾಮಸ್ಯ ಸಾನುರಾಗಾವ ಲೋಕನಮ್ ॥ ೧೦ ॥
ಧ್ಯಾಯೇದ್ ಅಜಸ್ರಮ್ ಮೀಶಸ್ಯ ಪದ್ಮಜಾದಿ ಪ್ರತೀಕ್ಷಿತಮ್ |
ಭ್ರೂಭಂಗಂ ಪಾರಮೇಷ್ಠ್ಯಾದಿ ಪದದಾಯಿ ವಿಮುಕ್ತಿದಮ್ ॥ ೧೧ ॥

ಸತತಂ ಚಿಂತಯೇಽನಂತಮ್ ಅಂತಕಾಲೇ ವಿಶೇಷತಃ l

ನೈವೋದಾಪುಗು ಗೃಣಂತೋಽಂತಂ ಯದ್ಗುಣಾನಾಮ್ ಅಜಾದಯಃ ||೧೨||

|| ಇತಿ ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ಪ್ರಥಮಂ ಸ್ತೋತ್ರಮ್ ||

ಮಲಗಿ ಪರಮಾದರದಿ ಪಾಡಲು ಕೇಳುವ ಕುಳಿತು ಹಾಡಲು ನಿಲುವ;

ನಿಂತರೆ ನಲಿವ ನಲಿದರೆ ಒಲಿವೆ ನಿಮಗೆ ಎಂಬ ಸುಲಭನೋ ಹರಿ;

ತನ್ನವರನ್ನು ರಮಾಧವನು ಅರಗಳಿಗೆ ಬಿಟ್ಟಿರಲಾರ;

ಒಲಿಸಲರಿಯದೆ ಪಾಮರರು ಬಳಲುವರು ಧರೆಯೊಳಗೆ;

ಭಕ್ತಿ ಯಾರಿಗೆ ಸುಲಭ? ಭಕ್ತರಿಗೆ ಸುಲಭ.

ಭಗವಂತ ಮತ್ತು ಭಕ್ತರ ನಡುವಿನ ಅನನ್ಯ ಬಂಧದ ಸುಂದರ ವರ್ಣನೆಯಿರುವ ಎರಡನೆಯ ಅಧ್ಯಾಯದಲ್ಲಿ ಶ್ರೀಮಧ್ವರು ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳಿಂದ ಕೂಡಿದ ಮನಸ್ಸಿನ ಸಾಗರದಲ್ಲಿ ಆನಂದದ ಅಲೆಗಳನ್ನು ಸೃಷ್ಟಿಸುವ ಚಂದ್ರನಂತಿರುವ ವಾಸುದೇವನ ಶ್ರೇಷ್ಟತೆಯ ನಿರೂಪಣೆಯೊಂದಿಗೆ

ಜ್ಞಾನ, ಆನಂದ ಮುಂತಾದ ಮಂಗಳಕರ ಗುಣಗಳ ಸಾಗರನಾಗಿರುವ ಪರಮಾತ್ಮನ ಮಹಾನ್ ಮತ್ತು ಅನನ್ಯ ಗುಣಗಳನ್ನು ವರ್ಣಿಸಿದ್ದಾರೆ. “ಸತ್ಪಾಂಥ - ಜನ - ಗೇಹಾಯ” ಸಂಸಾರದ ದೀರ್ಘ ಪ್ರಯಾಣದಲ್ಲಿ ನೊಂದು ಬೆಂದಿರುವ ನಮಗೆ ಶಾಂತಿಧಾಮರಾದ ದಿವ್ಯ ದಂಪತಿಗಳ ದರ್ಶನ.

ಸುಜನೋ ದಧಿ ಸಂವೃದ್ಧಿ ಪೂರ್ಣ ಚಂದ್ರೋ ಗುಣಾರ್ಣವಃ l

ಅಮಂದ ಆನಂದ ಸಾಂದ್ರೋ ನಃ ಪ್ರೀಯತಾಮ್ ಇಂದಿರಾ ಪತಿಃ || ೧ ||

ರಮಾ ಚಕೋರೀ ವಿಧವೇ ದುಷ್ಟ ಸರ್ಪೋದವಹ್ನಯೇ l

ಸತ್ಪಾಂಥ ಜನಗೇಹಾಯ ನಮೋ ನಾರಾಯಣಾಯ ತೇ ||೨||

ಚಿದ ಚಿದ್ಭೇದಮ್ ಅಖಿಲಂ ವಿಧಾಯಾಧಾಯ ಭುಂಜತೇ l

ಅವ್ಯಾಕೃತ ಗೃಹಸ್ಥಾಯ ರಮಾ ಪ್ರಣಯಿನೇ ನಮಃ||೩||

ಅಮಂದ ಗುಣಸಾರೋಽಽಪಿ ಮಂದಹಾಸೇನ ವೀಕ್ಷಿತಃ l

ನಿತ್ಯಮಿಂದಿರಯಾಽಽನಂದ ಸಾಂದ್ರೋ ಯೋ ನೌಮಿ ತಂ ಹರಿಮ್ ||೪||

ವಶೀ ವಶೇನ ಕಸ್ಯಾಪಿ ಯೋಽಜಿತೋ ವಿಜಿತಾಖಿಲಃ l

ಸರ್ವಕರ್ತಾ ನ ಕ್ರಿಯತೇ ತಂ ನಮಾಮಿ ರಮಾಪತಿಮ್ ||೫||

ಅಗುಣಾಯ ಗುಣೋದ್ರೇಕ ಸ್ವರೂಪಾಯಾದಿ ಕಾರಿಣೇ l

ವಿದಾರಿತಾರಿ ಸಂಘಾಯ ವಾಸುದೇವಾಯ ತೇ ನಮಃ || ೬ ||

ಆದಿದೇವಾಯ ದೇವಾನಾಂ ಪತಯೇ ಸಾದಿತಾರಯೇ ।
ಅನಾದ್ಯ ಜ್ಞಾನ ಪಾರಾಯ ನಮೋ ವರವರಾಯ ತೇ ॥ ೭ ॥
ಅಜಾಯ ಜನಯಿತ್ರೇಽಸ್ಯ ವಿಜಿತಾಖಿಲ ದಾನವ ।
ಅಜಾದಿ ಪೂಜ್ಯ ಪಾದಾಯ ನಮಸ್ತೇ ಗರುಡ ಧ್ವಜ ॥ ೮ ॥
ಇಂದಿರಾ ಮಂದ ಸಾಂದ್ರಾಗ್ರ್ಯ ಕಟಾಕ್ಷ ಪ್ರೇಕ್ಷಿತಾತ್ಮನೇ ।
ಅಸ್ಮದಿಷ್ಟೈಕ ಕಾರ್ಯಾಯ ಪೂರ್ಣಾಯ ಹರಯೇ ನಮಃ ॥೯॥

॥ ಇತಿ ಶ್ರೀಮದಾನಂತತೀರ್ಥಭಗತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ದ್ವಿತೀಯ ಸ್ತೋತ್ರಮ್ ॥

ಮೂರನೆಯ ಅಧ್ಯಾಯದಲ್ಲಿ ಶ್ರೀಮಧ್ವರು,

ಸತ್ಯಂ ಸತ್ಯಂ ಪುನಃ ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಂ ॥

ಎಂದು ನುಡಿದ ಸತ್ಯರೂಪಿ ಶ್ರೀವೇದವ್ಯಾಸರ ಸತ್ಯ ವಚನವನ್ನು ಧೃಡಿಕರಿಸುತ್ತಾ,

"ನಾಹಂ ಕರ್ತಾ, ನ ಕರ್ತಾ ತ್ವಂ, ಕರ್ತಾಯಸ್ತು ಸದಾ ಪ್ರಭುಃ" ಎಂಬ ವೇದ ವಾಕ್ಯವನ್ನು ಸ್ಪಷ್ಟೀಕರಿಸುತ್ತಾರೆ.

ಯಥಾ ಭಕ್ತಿ - ವಿಶೇಷೋತ್ರ ದೃಷ್ಯತೇ ಪುರುಷೋತ್ತಮೇ ।
ತಥಾ ಮುಕ್ತಿ - ವಿಶೇಷೋಪಿ ಜ್ಞಾನಿನಾಂ ಲಿಂಗ ಭೇದನೇ ॥

ಎಂದು ಭಕ್ತರಿಗೆ ನಿರ್ದೇಶಿಸಲ್ಪಟ್ಟ ಈ ಅಧ್ಯಾಯದಲ್ಲಿ ಶ್ರೀಮಧ್ವರು ಪರಮಾತ್ಮನ ಅನುಗ್ರಹ ಪಡೆಯಲು ಧರ್ಮಗ್ರಂಥಗಳ ಅನುಸರಣೆಯನ್ನು ಪ್ರೋತ್ಸಾಹಿಸುತ್ತಾ, ಹೃದಯಸ್ಪರ್ಶಿಯಾದ ರೀತಿಯಲ್ಲಿ, ಲೌಕಿಕ ಬಯಕೆಗಳ ನಿರಾಕರಣೆ, ನಿಷ್ಕಾಮದ ಆಚರಣೆಯಿಂದ ಮೋಕ್ಷ ಸಾಧನೆ ಪಂಥದ ವಿವರಣೆ ನೀಡುತ್ತಾರೆ. ಶ್ರೀಮಧ್ವರ ತತ್ತ್ವದ ಸಾರಾಂಶವೆಂದು ಪರಿಗಣಿಸಲಾದ ಆನಂದತೀರ್ಥ ಎಂದು ಕರೆಯಲ್ಪಡುವ ಮೂರನೆಯ ಅಧ್ಯಾಯ.

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರ ಧಿಯಾ ಸತತಮ್ ।
ಹರಿರೇವ ಪರೋ ಹರಿರೇವಗುರು ಹರಿರೇವ ಜಗತ್ಪಿತೃ ಮಾತೃಗತಿಃ ॥ ೧ ॥
ನತತೋಽಸ್ತ್ಯೆ ಪರಂ ಜಗದೀಡ್ಯ ತಮಂ ಪರಮಾತ್ ಪರತಃ ಪುರುಷೋತ್ತಮತಃ ।
ತದಲಂ ಬಹುಲೋಕ ವಿಚಿಂತನಯಾ ಪ್ರಣವಂ ಕುರು ಮಾನಸಮೀಶ ಪದೇ ॥ ೨ ॥
ಯತತೋಽಪಿ ಹರೇಃ ಪದ ಸಂಸ್ಮರಣೇ ಸಕಲಂ ಹ್ಯಘಮಾಶು ಲಯಂ ವ್ರಜತಿ ।
ಸ್ಮರತಸ್ತು ವಿಮುಕ್ತಿ ಪದಂ ಪರಮಂ ಸ್ಪುಟ ಮೇಷ್ಯತಿ ತತ್ ಕಿಮ ಪಾಕ್ರಿಯತೇ ॥ ೩ ॥

ಶೃಣು ತಾಮಲ ಸತ್ಯವಚಃ ಪರಮಂ ಶಪಥೇರಿತ ಮುಚ್ಛ್ರಿತ ಬಾಹು ಯುಗಮ್ ।
ನಹರೇಃ ಪರಮೋ ನಹರೇಃ ಸದೃಶಃ ಪರಮಃ ಸತುಸರ್ವ ಚಿದಾತ್ಮಗಣಾತ್ ॥ ೪ ॥
ಯದಿ ನಾಮ ಪರೋ ನ ಭವೇತ್ ಸ ಹರಿಃ ಕಥಮಸ್ಯ ವಶೇ ಜಗದೇತದಭೂತ್ ।
ಯದಿ ನಾಮ ನ ತಸ್ಯ ವಶೇ ಸಕಲಂ ಕಥಮೇವ ತು ನಿತ್ಯ ಸುಖಂ ನ ಭವೇತ್ ॥ ೫ ॥
ನ ಚ ಕರ್ಮ ವಿಮಾಮಲ ಕಾಲಗುಣ ಪ್ರಭೃತೀಶಮ ಚಿತ್ತನು ತದ್ಧಿ ಯತಃ ।
ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇ ದಿತಿ ವೈದಿಕಮಸ್ತಿ ವಚಃ ॥ ೬ ॥
ವ್ಯವಹಾರಭಿದಾಽಪಿ ಗುರೋರ್ಜಗತಾಂ ನ ತು ಚಿತ್ತಗತಾ ಸಹಿ ಚೋದ್ಯಪರಮ್ ।
ಬಹವಃ ಪುರುಷಾಃ ಪುರುಷಪ್ರವರೋ ಹರಿರಿತ್ಯವದತ್ ಸ್ವಯಮೇವ ಹರಿಃ ॥ ೭ ॥
ಚತುರಾನನ ಪೂರ್ವ ವಿಮುಕ್ತ ಗಣಾ ಹರಿಮೇತ್ಯ ತು ಪೂರ್ವ ವದೇವ ಸದಾ ।
ನಿಯತೋಚ್ಚವಿನೀಚತ ಯೈವ ನಿಜಾಂ ಸ್ಥಿತಿಮಾಪುರಿತಿ ಸ್ಮ ಪರಂ ವಚನಮ್ ॥ ೮ ॥
ಆನಂದತೀರ್ಥ ಸನ್ನಾಮ್ನಾ ಪೂರ್ಣ ಪ್ರಜ್ಞಾಭಿ ಧಾಯುಜಾ ।
ಕೃತಂ ಹರ್ಯಷ್ಟಕಂ ಭಕ್ತ್ಯಾ ಪಠತಃ ಪ್ರೀಯತೇ ಹರಿಃ ॥ ೯ ॥

॥ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ತೃತೀಯ ಸ್ತೋತ್ರಮ್॥

"ಯದ್ ಭಾವಂ ತದ್ ಭವತಿ", "ಯಥಾ ಯಥಾ ಉಪಾಸತೇ ತದೇವ ಭವತಿ", "ನಿಜ ಪೂರ್ಣ ಸುಖ ಅಮಿತ ಭೋದ ತನು", ತನು ಮನಗಳು ಶುದ್ಧೀಕರಿಸಿ ಧ್ಯಾನದೆಡೆಗೆ ಪಯಣಿಸುವ ಮಾರ್ಗದ ಸೂಚನೆಯುಳ್ಳ ನಾಲ್ಕನೇ ಅಧ್ಯಾಯದಲ್ಲಿ ಶ್ರೀಮಧ್ವರು "ಸುಧೀ" ಪ್ರಬುದ್ಧ ಆರಾಧಕರಾಗಿ ಉನ್ನತ ಸ್ಥಾಯಿಗೆ ತಲುಪಲು ಪ್ರೇರಣೆ ನೀಡುವುದರೊಂದಿಗೆ ಪ್ರಕಾಶ, ಬಲ, ದಯೆ, ಆನಂದ, ಜ್ಞಾನ ಎಲ್ಲದರಲ್ಲೂ ಪೂರ್ಣನಾಗಿರುವ ಶ್ರೀಹರಿಯ ಸಾಧನೆ ಮತ್ತು ಭಕ್ತಿ ಮಾರ್ಗದಲ್ಲಿ ನಡೆಯಲು ಉಪದೇಶ ನೀಡುತ್ತಾರೆ. "ಉಚ್ಚ ಸುಖಮ್ ಧ್ರುವಂ ಭವತಿ". ಭಕ್ತಿಯಿಂದ ಪಠಿಸುವವರಿಗೆ ನಿಸ್ಸಂದೇಹವಾಗಿ ಮುಕ್ತಿಯ ಶುದ್ಧ ಆನಂದ ದಾಯಿಯೆಂದು ಶ್ರೀಮಧ್ವರಿಂದ ಭರವಸೆ ನಾಲ್ಕನೆಯ ಅಧ್ಯಾಯದಲ್ಲಿ.

ನಿಜಪೂರ್ಣ ಸುಖಾಮಿತ ಬೋಧತನುಃ ಪರಶಕ್ತಿರನಂತ ಗುಣಃ ಪರಮಃ ।
ಅಜರಾಮರಣಃ ಸಕಲಾರ್ತಿ ಹರಃ ಕಮಲಾಪತಿ ರೀಡ್ಯತಮೋಽವತು ನಃ ॥ ೧ ॥ ಯದಸುಪ್ತಿ
ಗತೋಽಪಿ ಹರಿಃ ಸುಖವಾನ್ ಸುಖರೂಪಿಣ ಮಾಹುರತೋ ನಿಗಮಾಃ ।
ಸ್ವಮತಿ ಪ್ರಭವಂ ಜಗದಸ್ಯ ಯತಃ ಪರ ಬೋಧ ತನುಂ ಚತತಃ ಖಪತಿಂ ॥ ೨ ॥
ಬಹು ಚಿತ್ರ ಜಗದ್ಬಹುಧಾ ಕರಣಾತ್ ಪರಶಕ್ತಿರ್ ಅನಂತಗುಣಃ ಪರಮಃ ।
ಸುಖರೂಪ ಮಮುಷ್ಯ ಪದಂ ಪರಮಂ ಸ್ಮರತಸ್ತು ಭವಿಷ್ಯತಿ ತತ್ ಸತತಮ್ ॥ ೩ ॥

ಸ್ಮರಣೇ ಹಿ ಪರೇಶಿ ತುರಸ್ಯ ವಿಭೋರ್ ಮಲಿನಾನಿ ಮನಾಂಸಿ ಕುತಃ ಕರಣಮ್ ।
ವಿಮಲಂ ಹಿ ಪದಂ ಪರಮಂ ಸ್ವರತಂ ತರುಣಾರ್ಕ ಸವರ್ಣ ಮಜಸ್ಯ ಹರೇಃ ॥ ೪ ॥
ವಿಮಲೈಃ ಶ್ರುತಿ ಶಾಣ ನಿಶಾತತಮೈಃ ಸುಮನೋऽ ಸಿಭಿರಾಶು ನಿಹತ್ಯ ಧೃಢಮ್ ।
ಬಲಿಮಂ ನಿಜವೈರಿಣ ಮಾತ್ಮತಮೋ ಭಿದಮೀಶಮನಂತ ಮುಪಾಸ್ವ ಹರಿಮ್ ॥ ೫ ॥
ಸ ಹಿ ವಿಶ್ವಸೃಜೋ ವಿಭು ಶಂಭು ಪುರಂದರ ಸೂರ್ಯ ಮುಖಾನ ಪರಾನ್ ಅಮರಾನ್।
ಸೃಜತೀಡ್ಯ ತಮೋऽವತಿ ಹಂತಿ ನಿಜಂ ಪದ ಮಾಪಯತಿ ಪ್ರಣತಾನ್ ಸುಧಿಯಾ ॥ ೬ ॥
ಪರಮೋऽಪಿ ರಮೇಶಿ ತುರಸ್ಯ ಸಮೋ ನ ಹಿ ಕಶ್ಚಿದ ಭೂನ್ನ ಭವಿಷ್ಯತಿ ಚ ।
ಕ್ವಚಿದದ್ಯತನೋऽಪಿ ನ ಪೂರ್ಣಸದಾ ಗಣಿತೇಡ್ಯಗುಣಾನುಭವ ವೈಕತನೋಃ ॥ ೭ ॥
ಇತಿ ದೇವ ವರಸ್ಯ ಹರೇಃ ಸ್ತವನಂ ಕೃತವಾನ್ ಮುನಿರುತ್ತಮ ಮಾದರತಃ ।
ಸುಖತೀರ್ಥ ಪದಾಭಿ ಹಿತಃ ಪಠತಸ್ತದಿದಂ ಭವತಿ ಧ್ರುವಮುಚ್ಚ ಸುಖಮ್ ॥ ೮ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಶು ದ್ವಾದಶ ಸ್ತೋತ್ರೇಷು ಚತುರ್ಥ ಸ್ತೋತ್ರಮ್ ॥

ನಿನ್ನಧೀನ ಎನ್ನ ತನುಮನ ನಿನ್ನಧೀನ ಎನ್ನ ಧನಧಾನ್ಯ
ಎನ್ನ ವಸ್ತುವಾಹನ ನಿನ್ನಧೀನ ಎನ್ನ ಪುತ್ರ ಮಿತ್ರ ಕಳತ್ರರು ನಿನ್ನಧೀನ
ಎನ್ನ ಅನ್ನೋದಕ ನಿನ್ನಧೀನ ಎನ್ನಧೀನ ಆವುದುಂಟು ನೀನೆ ನೋಡು
ಚತುರಾನನ ಚತುರ ಮೂರುತಿ ಚತುರಾತ್ಮ ಚತುರ ಕೀರುತಿ
ಚತುರ್ಭುಜ ಚತುರ್ವಾಣಿ ಚತುರಾಯುಧ ಚತುರ್ವಿಧ ಮುಕ್ತಿದಾಯಕ
ಚತುರ್ದಶ ಭುವನೇಶ ॥

ಸೃಷ್ಟಿಯ ಆದಿಯಲ್ಲಿ ವ್ಯಕ್ತನಾದ ಪರಂಧಾಮನ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರಲ್ಲಿ ಆತ್ಮದಾಯಕನಾದ ವಾಸುದೇವನನ್ನು ಸಂಭೋಧಿಸುತ್ತಾ ಅಪರಿಮೇಯ, ಸದೋದಿತ, ವೇಧುರ, ಧರಾ - ಧರ - ಧಾರಣ ಮುಂತಾದ ವಿಶೇಷಣೆಗಳಿಂದ ಕೂಡಿದ ಭಗವಂತನ ಸ್ತುತಿಯೊಂದಿಗೆ ಶ್ರೀಮಧ್ವರು ಐದನೇ ಅಧ್ಯಾಯವನ್ನು ಆರಂಭಿಸಿ ಚತುರ್ವಿಂಶತಿ ನಾಮಗಳಿಂದ ಪರಮಾತ್ಮನ ರೂಪ ಶ್ರೇಷ್ಠತೆಯನ್ನು ಕೇಂದ್ರೀಕರಿಸಿ ಪರಮ ಭಕ್ತಿಯಿಂದ ವಂದಿಸುತ್ತಾರೆ.

ವಾಸುದೇವಾ ಪರಿಮೇಯ ಸುಧಾಮನ್ ಶುದ್ಧ ಸದೋದಿತ ಸುಂದರಿ ಕಾಂತ ।
ಧರಾ ಧರ ಧಾರಿಣ ವೇಧುರಧರ್ತಃ ಸೌಧೃತಿ ದೀಧಿತಿ ವೇಧೃ ವಿಧಾತಃ ॥ ೧ ॥
ಅಧಿಕ ಬಂಧಂ ರಂಧಯ ಬೋಧಾಚ್ಛಿಂಧಿ ಪಿಧಾನಂ ಬಂಧುರ ಮದ್ಧಾ।
ಕೇಶವ ಕೇಶವ ಶಾಸಕ ವಂದೇ ಪಾಶ ಧರಾರ್ಚಿತ ಶೂರ ವರೇಶ ॥ ೨ ॥

ನಾರಾಯಣಾಮಲ ಕಾರಣ ವಂದೇ ಕಾರಣ ಕಾರಣ ಪೂರ್ವ ವರೇಣ್ಯ ।
ಮಾಧವ ಮಾಧವ ಸಾಧಕ ವಂದೇ ಬಾಧಕ ಭೋಧಕ ಶುದ್ಧ ಸಮಾಧೇ ॥ ೩ ॥
ಗೋವಿಂದ ಗೋವಿಂದ ಪುರಂದರ ವಂದೇ ದೈವತ ಮೋದನ ವೇದಿತ ಪಾದ ।
ವಿಷ್ಣೋ ಸೃಜಿಷ್ಣೋ ಗ್ರಸಿಷ್ಣೋ ವಿವಂದೇ ಕೃಷ್ಣ ಸದುಷ್ಟವಧಿಷ್ಣೋ ಸುಧೃಷ್ಣೋ॥ ೪ ॥
ಮಧುಸೂದನ ದಾನವ ಸಾದನ ವಂದೇ ದೈವತ ಮೋದನ ವೇದಿತ ಪಾದ ।
ತ್ರಿವಿಕ್ರಮ ನಿಷ್ಕ್ರಮ ವಿಕ್ರಮ ವಂದೇ ಸುಕ್ರಮ ಸಂಕ್ರಮಹುಂಕೃತ ವಕ್ತ್ರ ॥ ೫ ॥
ವಾಮನ ವಾಮನ ಭಾಮನ ವಂದೇ ಸಾಮನ ಸೀಮನ ಶಾಮನ ಸಾನೋ ।
ಶ್ರೀಧರ ಶ್ರೀಧರ ಶಂಧರ ವಂದೇ ಭೂಧರ ವಾರ್ಧರ ಕಂಧರ ಧಾರಿನ್ ॥ ೬ ॥
ಹೃಷಿಕೇಶ ಸುಕೇಶ ಪರೇಶ ವಿವಂದೇ ಶರಣೇಶ ಕಲೇಶ ಬಲೇಶ ಸುಖೇಶ ।
ಪ್ದ್ಮನಾಭ ಶುಭೋದ್ಭವ ವಂದೇ ಸಂಭೃತ ಲೋಕ ಭರಾಭರ ಭೂರೆ ।
ದಾಮೋದರ ದೂರ ತರಾಂತರ ವಂದೇ ದಾರಿತ ಪಾರಗಪಾರ ಪರಸ್ಮಾತ್ ॥ ೭ ॥
ಆನಂದತೀರ್ಥ ಮುನೀಂದ್ರಕೃತಾ ಹರಿ ಗೀತಿರಿಯಂ ಪರಮಾದರತಃ ।
ಪರಲೋಕ ವಿಲೋಕನ ಸೂರ್ಯ ನಿಭಾ ಹರಿ ಭಕ್ತಿ ವಿವರ್ಧನ ಶೌಂಡತಮಾ ॥ ೮ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ಪಂಚಮ ಸ್ತೋತ್ರಮ್ ॥

ಮತ್ಸ್ಯ ಕೂರ್ಮೋ ವರಾಹಶ್ಚ ನಾರಸಿಂಹೋಚ ವಾಮನಾಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಾಃ ಕಲ್ಕಿ ಚ ತೇ ದಶಃ ॥

ಶ್ರೀಮಧ್ವರು ಆರನೆಯ ಅಧ್ಯಾಯದಲ್ಲಿ ವಿಷ್ಣುವಿನ ದಶಾವತಾರಗಳನ್ನು ವಿವರಿಸುತ್ತಾ ಶ್ರೀವಿಷ್ಣುವಿನ ಸ್ವಾಮಿತ್ವ ಕುರಿತು ಪ್ರಸ್ತಾಪಿಸುತ್ತಾರೆ. ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಸಿದ್ಧಾಂತದ ಪರಿಚಯ ನೀಡಿ, ಮುಕ್ತಿಗರ್ಹನಾದ ಮಾನವನು ಶಾಶ್ವತ ಸುಖವನ್ನು ಹೊಂದಲು ಪರಮಾತ್ಮನಲ್ಲಿ ಮಾಡುವ ಉಪಾಸನೆ ಈ ದಶಾವತಾರ ಸ್ತೋತ್ರ.

ದೇವಕಿ ನಂದನ ನಂದ ಕುಮಾರ ವೃಂದಾವನಾಂಚನ ಗೋಕುಲ ಚಂದ್ರ ।
ಕಂದ ಫಲಾಶನ ಸುಂದರ ರೂಪ ನಂದಿತ ಗೋಕುಲ ವಂದಿತ ಪಾದ ॥ ೧ ॥
ಇಂದ್ರ ಸುತಾವಕ ನಂದಕ ಹಸ್ತ ಚಂದನ ಚರ್ಚಿತ ಸುಂದರಿ ನಾಥ ।
ಇಂದೀವರೋದರ ದಳ ನಯನ ಮಂದರ ಧಾರಿನ್ ಗೋವಿಂದ ವಂದೇ ॥ ೨ ॥
ಚಂದ್ರ ಶತಾನನ ಕುಂದ ಸುಹಾಸ ನಂದಿತ ದೈವತಾನಂದ ಸುಪೂರ್ಣ ।
ಮತ್ಸ್ಯಕರೂಪ ಲಯೋದ ವಿಹಾರಿನ್ ವೇದ ವಿನೇತ್ರ ಚತುರ್ಮುಖ ವಂದ್ಯ ॥ ೩ ॥

ಕೂರ್ಮ ಸ್ವರೂಪಕ ಮಂದರ ಧಾರಿನ್ ಲೋಕ ವಿಧಾರಕ ದೇವ ವರೇಣ್ಯ ।
ಸೂಕರ ರೂಪಕ ದಾನವ ಶತ್ರು ಭೂಮಿ ವಿಧಾರಕ ಯಜ್ಞ ವರಾಂಗ ॥ ೪ ॥
ದೇವ ನೃಸಿಂಹ ಹಿರಣ್ಯಕ ಶತ್ರೋ ಸರ್ವ ಭಯಾಂತಕ ದೈವತ ಬಂಧೋ ।
ವಾಮನ ವಾಮನ ಮಾಣವ ವೇಷ ದೈತ್ಯ ಕುಲಾಂತಕ ಕಾರಣ ರೂಪ ॥ ೫ ॥
ರಾಮ ಭೃಗೂದ್ವಹ ಸೂರ್ಜಿತ ದೀಪ್ತೇ ಕ್ಷತ್ರ ಕುಲಾಂತಕ ಶಂಭು ವರೇಣ್ಯ ।
ರಾಘವ ರಾಘವ ರಾಕ್ಷಸ ಶತ್ರೋ ಮಾರುತಿ ವಲ್ಲಭ ಜಾನಕಿ ಕಾಂತಾ ॥ ೬ ॥
ದೇವಕಿ ನಂದನ ಸುಂದರ ರೂಪ ರುಗ್ಮಿಣಿ ವಲ್ಲಭ ಪಾಂಡವ ಬಂಧೋ ।
ದೈತ್ಯ ವಿಮೋಹಕ ನಿತ್ಯ ಸುಖಾದೇ ದೇವ ಸುಭೋಧಕ ಬುದ್ಧ ಸ್ವರೂಪ ॥ ೭ ॥
ದುಷ್ಟ ಕುಲಾಂತಕ ಕಲ್ಕಿ ಸ್ವರೂಪ ಧರ್ಮ ವಿವರ್ಧನ ಮೂಲ ಯುಗಾದೇ ।
ನಾರಾಯಣಾಮಲ ಕಾರಣ ಮೂರ್ತೇ ಪೂರ್ಣ ಗುಣಾರ್ಣವ ನಿತ್ಯ ಸುಭೋಧ ॥ ೮ ॥
ಆನಂದತೀರ್ಥ ಮುನೀಂದ್ರ ಕೃತಾ ಹರಿಗಾಥಾ ।
ಪಾಪಹರಾ ಶುಭಾ ನಿತ್ಯ ಸುಖಾರ್ಥಾ ॥ ೯ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ಷಷ್ಠ ಸ್ತೋತ್ರಮ್ ॥

ಶ್ರೀಮಧ್ವರು ಏಳನೆಯ ಅಧ್ಯಾಯದಲ್ಲಿ ಲಕ್ಷ್ಮೀ ನಾರಾಯಣರ ಅತ್ಯಂತ ಸಮೀಪಕ್ಕೆ ನಮ್ಮನ್ನು ಎಳೆದೊಯ್ಯುವುದರ ಜೊತೆಗೆ ನಮ್ಮ ಹೃದಯಕ್ಕೆ ಈ ದಿವ್ಯ ದಂಪತಿಗಳನ್ನು ಅತ್ಯಂತ ಪ್ರೀತಿಪಾತ್ರರಾಗಿ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. "ಶ್ರೀರ್ಯತ್ಕಟಾಕ್ಷ ಬಲವತ್ಯಾಜಿತಂ ನಮಾಮಿ" ಎಂದು ಪ್ರತಿ ಶ್ಲೋಕದಲ್ಲೂ ವಂದಿಸುವ ಶ್ರೀಮಧ್ವರು "ಸಾಕ್ಷಾತ್ ರಮಾ ಹರಿ ಮನಃ ಪ್ರಿಯಃ" ಎಂಬ ಉತ್ತಮ ಅರ್ಥಗರ್ಭಿತವಾದ ಫಲಶ್ರುತಿ ನೀಡಿದ್ದಾರೆ. ಮಹಾಲಕ್ಷ್ಮಿಯ ಸ್ತುತಿಗಳಲ್ಲಿ ಉತ್ಕೃಷ್ಟವಾದ ಸ್ತೋತ್ರವೆಂದು ಖ್ಯಾತಿ ಹೊಂದಿರುವ ಏಳನೆಯ ಅಧ್ಯಾಯ.

ವಿಶ್ವ ಸ್ಥಿತಿ ಪ್ರಲಯ ಸರ್ಗ ಮಹಾ ವಿಭೂತಿವೃತ್ತಿ
ಪ್ರಕಾಶ ನಿಯಮಾವೃತಿ ಬಂಧ ಮೋಕ್ಷಾಃ ।
ಯಸ್ಯಾ ಅಪಾಂಗಲವ ಮಾತ್ರತ ಊರ್ಜಿತಾ ಸಾ
ಗೀರ್ವಾಣ ಸಂತತಿರಿಯಂ ಯದಪಾಂಗ ಲೇಶಮ್ ॥ ೧ ॥
ಬ್ರಹ್ಮೇಶ ಶಕ್ರ ರವಿ ಧರ್ಮ ಶಶಾಂಕ ಪೂರ್ವಗೀರ್ವಾಣ
ಸಂತತಿರಿಯಂ ಯದ ಪಾಂಗಲೇಶಮ್ ।
ಆಶ್ರಿತ್ಯ ವಿಶ್ವ ವಿಜಯಂ ವಿಸೃಜತ್ಯ ಚಿಂತ್ಯಾ

ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೧ ‖
ಧರ್ಮಾರ್ಥ ಕಾಮ ಸುಮತಿ ಪ್ರಚಯಾದ್ಯ
ಶೇಷ-ಸನ್ಮಂಗಲಂ ವಿದಧತೇ ಯದಪಾಂಗಲೇಶಮ್
ಆಶ್ರಿತ್ಯ ತತ್ಪ್ರಣ ತಸತ್ಪ್ರಣತಾ ಅಪೀಡ್ಯಾ
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೩ ‖
ಷಡ್ವರ್ಗ ನಿಗ್ರಹ ನಿರಸ್ತ ಸಮಸ್ತ ದೋಷಾ
ದ್ಯಾಯಂತಿ ವಿಷ್ಣು ಮೃಷಯೋ ಯದಪಾಂಗ ಲೇಶಮ್ ।
ಆಶ್ರೀತ್ಯ ಯಾನಪಿ ಸಮೇತ್ಯ ನ ಯಾತಿ ದುಃಖಂ
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೪ ‖
ಶೇಶಾಹಿ ವೈರಿ ಶಿವ ಶಕ್ರ ಮನು ಪ್ರಧಾನಚಿತ್ರೋರು
ಕರ್ಮ ರಚನಂ ಯದಪಾಂಗ ಲೇಶಮ್ ।
ಆಶ್ರಿತ್ಯ ವಿಶ್ವ ಮಖಿಲಂ ವಿದ ಧಾತಿ ಧಾತಾ
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೫ ‖
ಶಕ್ರೋಗ್ರ ದೀಧಿತಿ ಹಿಮಾಕರ ಸೂರ್ಯ
ಸೂನುಪೂರ್ವಂ ನಿಹತ್ಯ ನಿಖಿಲಂ ಯದಪಾಂಗಲೇಶಮ್ ।
ಆಶ್ರಿತ್ಯ ನೃತ್ಯತಿ ಶಿವಃ ಪ್ರಕಟೋರು ಶಕ್ತಿ ।
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೬ ‖
ತತ್ಪ್ರಾದ ಪಂಕಜ ಮಹಾ ಸನತಾ ಮವಾಪ
ಶರ್ವಾದಿ ವಂದ್ಯ ಚರಣೋ ಯದಪಾಂಗಲೇಶಮ್ ।
ಆಶ್ರಿತ್ಯ ನಾಗಪತಿ ರನ್ಯಸುರೈರ್ದುರಾಪಾಂ
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೭ ‖
ನಾಗಾರಿ ರುದ್ರ ಬಲ ಪೌರುಷ ಆಪ ವಿಷ್ಣೋರ್ವಾಹತ್ವ
ಮುತ್ತ ಮಜವೋ ಯದಪಾಂಗ ಲೇಶಮ್ ।
ಆಶ್ರಿತ್ಯ ಶಕ್ರ ಮುಖ ದೇವಗಣೈರ ಚಿಂತ್ಯಂ
ಶ್ರೀರ್ಯತ್ಕಟಾಕ್ಷ ಬಲವತ್ಯ ಜಿತಂ ನಮಾಮಿ ‖ ೮ ‖
ಆನಂದತೀರ್ಥ ಮುನಿ ಸನ್ಮುಖಿ ಪಂಕಜೋತ್ಥಂ

ಸಾಕ್ಷಾದ್ರಮಾ ಹರಿ ಮನಃಪ್ರಿಯ ಮುತ್ತಮಾರ್ಥಮ್ ।
ಭಕ್ತ್ಯಾ ಪರತ್ಯ ಜಿತ ಮಾತ್ಮನಿ ಸನ್ನಿಧಾಯಯಃ
ಸ್ತೋತ್ರ ಮೇತದಭಿಯಾತಿ ತಯೋರಭೀಷ್ಟಮ್ ॥ ೯ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ಸಪ್ತಮ ಸ್ತೋತ್ರಮ್ ॥

ಶ್ರೀಮಹಾಲಕ್ಷ್ಮಿಯು ವಿಷ್ಣುವನ್ನು ಪ್ರೀತಿಯ ನೋಟದಿಂದ ನೋಡುತ್ತಾ ನಿರಂತರವಾಗಿ ಮಾಡುವ ಆರತಿಯಿಂದ ಪ್ರಾರಂಭವಾಗುವ ಎಂಟನೆಯ ಅಧ್ಯಾಯದಲ್ಲಿ "ಪ್ರೀಣಯಾಮೋ ವಾಸುದೇವಂ ದೇವತಾ ಮಂಡಲಾ ಖಂಡ ಮಂಡನಂ" ಎಂದು ಭಗವನ್ನಾಮ ಸ್ಮರಣೆಯ ಅನಿರ್ವಚನೀಯ ಆನಂದವನ್ನು ಅನುಭವಿಸಲು ಪ್ರತಿ ಶ್ಲೋಕದ ಅಂತ್ಯದಲ್ಲೂ ಕರೆ ನೀಡಿದ್ದಾರೆ. ಭಗವದ್ಭಕ್ತಿಯೇ ನಮ್ಮ ಜೀವನದ ಪರಮಾರ್ಥ ಮತ್ತು ಗುರಿಯಾಗಬೇಕೆಂಬುದು ಶ್ರೀಮಧ್ವರ ಸಂದೇಶ. ಇಷ್ಟಪ್ರಾಪ್ತಿ ಮತ್ತು ಅನಿಷ್ಟ ನಿವೃತ್ತಿದಾಯಕವಾದ ಎಂಟನೆಯ ಅಧ್ಯಾಯ.

ವಂದಿತ ಶೇಷ ವಂದ್ಯೋರು ವೃಂದಾರಕಂ
ಚಂದನ ಚರ್ಚಿತೋ ದಾರಪೀಣಾಂಸಕಮ್ ।
ಇಂದಿರ ಚಂಚಲ ಪಾಂಗನೀರಾಜಿತಂ
ಮಂದರೋದ್ಧಾರಿ ವೃತ್ತೋದ್ಭುಜಾಭೋಗಿನಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಸೃಷ್ಟಿ ಸಂಹಾರ ಲೀಲಾವಿಲಾಸಾತತಂ
ಪುಷ್ಟ ಷಾಡ್ಗುಣ್ಯ ಸದ್ವಿಗ್ರಹೋಲ್ಲಾಸಿನಮ್ ।
ದುಷ್ಟ ನಿಶ್ಯೇಷ ಸಂಹಾರಕ ಮೋದ್ಯತಂ
ಹೃಷ್ಟ ಪುಷ್ಟಾನುತಿಶಿಷ್ಟ ಪ್ರಜಾಸಂಶ್ರಯಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಉನ್ನತ ಪ್ರಾರ್ಥಿತಾ ಶೇಷ ಸಂಸಾಧಕಂ
ಸನ್ನತಾಲೌಕಿಕಾ ನಂದದ ಶ್ರೀಪದಮ್ ।

ಭಿನ್ನ ಕರ್ಮಾಶಯ ಪ್ರಾಣಿಸಂಪ್ರೇರಕಂ
ತನ್ನಕಿಂನೇತಿ ವಿದ್ವತ್ಸು ಮಿಮಾಂಸಿತಂ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ವಿಪ್ರಮುಖ್ಯೈಃ ಸದಾವೇದವಾದೋನ್ಮುಖೈಃ
ಸುಪ್ರತಾಪೈಃ ಕ್ಷೀತಿಶೇಶ್ವರೈಶ್ಚಾರ್ಚಿತಂ ।
ಅಪ್ರತರ್ಕ್ಯೋರು ಸಂವಿದ್ಗುಣಂ ನಿರ್ಮಲಂ
ಸಪ್ರಕಾಶಾಜರಾನಂದ ರೂಪಂಪರಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಅತ್ಯಯೋ ಯಸ್ಯ ಕೇನಾಪಿನಕ್ವಾಪಿಹಿ
ಪ್ರತ್ಯತೋ ಯದ್ಗುಣೇಷೂತ್ತಮಾನಾಂಪರಃ ।
ಸತ್ಯಸಂಕಲ್ಪ ಏಕೋ ವರೋಣ್ಯೋ
ವಶೀ ಮತ್ಯನೂನ್ಯೈಃ ಸದಾ ವೇದವಾದೋದಿತಃ ॥
ಪಶ್ಯತಾಂ ದುಃಖ ಸಂತಾನ ನಿರ್ಮೂಲನಂ
ದೃಶ್ಯತಾಂ ದೃಶ್ಯತಾಮಿತ್ಯ ಜೇಶಾಚಿ(ರ್ಥಿ)ತಮ್ ।
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ
ಪಶ್ಯತಾಂ ಸ್ವೇಚ್ಛಯಾ ಸಜ್ಜನೇಷ್ವಾಗತಂ ॥
ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ
ವಿಗ್ರಹೋಯಸ್ಯ ಸರ್ವೇಗುಣಾ ಏವ ಹಿ ।
ಉಗ್ರ ಆದ್ಯೋಽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ
ಸದ್ಗೃಹೀತಃ ಸದಾಯಃ ಪರಂದೈವತಮ್ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ
ಪ್ರಚ್ಯುತೋಽಶೇಷ ದೋಷೈಃ ಸದಾಪೂರ್ತಿತ ।

ಉಚ್ಯತೇ ಸವವೇದೋರು ವಾದ್ಯೈರಜಃ

ಸ್ವಜಿತೋ(ಚ್ಯತೇ) ಬ್ರಹ್ಮರುದ್ರೇಂದ್ರ ಪೂರ್ವೈಸ್ಸದಾ ||

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ||

ಧಾರ್ಯತೇ ಯೇನವಿಶ್ವಂ ಸದಾಜಾದಿಕಂ

ವಾರ್ಯತೇ ಶೇಷ ದುಃಖಂ ನಿಜಧ್ಯಾಯಿನಾಂ |

ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ

ಕಾರ್ಯತೇ ಚಾಖಿಲಂ ಸರ್ವಭೂತ್ಯೈಃ ಸದಾ ||

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ||

ಸವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯ

ಸರ್ವದಾ ಯಾಂತಿಭಕ್ತ್ಯಾವಿಶುದ್ಧಾತ್ಮನಾಂ |

ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ

ಕುರ್ವತೇ ಕರ್ಮ ಯತ್ಪ್ರೀತಯೆ ಸಜ್ಜನಾಃ ||

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ||

ಅಕ್ಷಯಂ ಕರ್ಮಯಸ್ಮಿನ್ ಪರೇಸ್ವರ್ಪಿತಂऽ

ಪ್ರಕ್ಷ ಯಂ ಯಾಂತಿ ದುಃಖಾನಿಃಯನ್ನಾಮತ |

ಅಕ್ಷರೋಽಯೋಽಜರಃ ಸರ್ವದೈವಾಮೃತಃ

ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಕಮ್ ||

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ||

ನಂದಿತೀರ್ಥೋರುಸನ್ನಾಮಿನೋ ನಂದಿನಃ

ಸಂದಧಾನಾಃ ಸದಾನಂದದೇವೇ ಮತಿಮ್ |

ಮಂದಹಾಸಾರುಣಾಪಾಂಗ ದತ್ತೋನ್ನತಿಂ

ನ(ವಂ)ದಿತಾ ಶೇಷದೇವಾದಿ ವೃಂದಂ ಸದಾ ||

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ಅಷ್ಟಮಸ್ತೋತ್ರಂ ಸಂಪೂರ್ಣಂ ॥

“ಶ್ರೀ ದಿಗ್ವಿಜಯ ರಾಮೋ ವಿಜಯತೇ” ಭವ ಮಮ ಶರಣಮ್, ಜಗದೇಕ ಕಾರಣ ರಾಮ ರಮಾರಮಣನಲ್ಲಿ ಶರಣಾಗತಿಯ ಶ್ರೀಮಧ್ವರ ಒಂಬತ್ತನೆಯ ಅಧ್ಯಾಯದಲ್ಲಿ ಅಜ್ಞಾನದ ಕಗ್ಗತ್ತಲೆಯನ್ನು ಛಿದ್ರಗೊಳಿಸಲು ಸಮರ್ಥನಾದ ಸೀತಾಪತಿ ಶ್ರೀರಾಮಚಂದ್ರನ ಅನಂತ ಮಂಗಳ ಗುಣ ಲಕ್ಷಣೆಗಳ ವರ್ಣನೆಯೊಂದಿಗೆ ದಶಾವತಾರಗಳಲ್ಲಿ ಪರಮಾತ್ಮನ ಅಸಾಧಾರಣ ಕ್ರಿಯೆಗಳ ವರ್ಣನೆ, ಭಗವಂತನ ಶಕ್ತಿ ಸಾಮರ್ಥ್ಯಗಳ ತಿಳುವಳಿಕೆ, ಪರಮಾತ್ಮನನ್ನು ಅರಿಯಲು ಸಹಕಾರಿಯೆಂಬ ನಿಲುವಿನಲ್ಲಿ ಶ್ರೀಮಧ್ವರ ಶರಣಾಗತಿ.

ಅತಿಮತ ತಮೋಗಿರಿ ಸಮಿತಿ ವಿಭೇದನ ಪಿತಾಮಹ ಭೂತಿದ ಗುಣ ಗಣ ನಿಲಯ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೧ ॥
ವಿಧಿಭವಮುಖಸುರ ಸತತಸುವಂದಿತ ರಮಾಮನೋವಲ್ಲಭ ಭವಮಮ ಶರಣಮ್।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೨ ॥
ಅಗಣಿತ ಗುಣಗಣಮಯ ಶರೀರಹೇ ವಿಗತ ಗುಣೇತರ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೩ ॥
ಅಪರಿಮಿತಸುಖನಿಧಿ ವಿಮಲಸುದೇಹ ಹೇ ವಿಗತಸುಖೇತರ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೪ ॥
ಪ್ರಚಲಿತಲಯ ಜಲವಿಹರಣ ಶಾಶ್ವತ ಸುಖಮಯ ಮೀನ ಹೇ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೫ ॥
ಸುರದಿತಿಜಸುಬಲ ವಿಲುಲಿತ ಮಂದರಧರ ವರಕೂರ್ಮ ಹೇ ಭವಮಮ ಶರಣಮ್।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೬ ॥
ಸಗಿರಿವರ ಧರಾತಲವಹ ಸುಸೂಕರ ಪರಮ ವಿಭೋಧ ಹೇ ಭವಮಮ ಶರಣಮ್।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೭ ॥
ಅತಿಬಲ ದಿತಿಸುತ ಹೃದಯವಿಭೇದನ ಜಯ ನೃಹರೇಽಮಲ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೮ ॥

ಬಲಿಮುಖದಿತಿಸುತ ವಿಜಯ ವಿನಾಶನ ಜಗದವ ನಾಜಿತಭವ ಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥ ೯ ॥
ಆವಿಜಿತಕುನೃಪತಿ ಸಮಿತಿ ವಿಖಂಡನ ರಮಾವರ ವೀರಪ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೦ ॥
ಖರತರನಿಶಿಚರದಹನ ಪರಾಮೃತ ರಘುವರ ಮಾನದ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೧ ॥
ಸುಲಲಿತತನುವರ ವರದ ಮಹಾಬಲ ಯದುವರ ಪಾರ್ಥಪ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೨ ॥
ದಿತಿಸುತಮೋಹನ ವಿಮಲವಿಬೋಧನ ಪರಗುಣ ಬುದ್ಧ ಹೇ ಭವಮಮ ಸರ್ಹಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೩ ॥
ಕಲಿಮಲಹುತವಹ ಸುಭಗ ಮಹೋತ್ಸವ ಶರಣದ ಕಲ್ಕೀಶ(ಹೇ)ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೪ ॥
ಅಖಿಲಜನಿವಿಲಯ ಪರಸುಖ ಕಾರಣ ಪರ ಪುರುಷೋತ್ತಮ ಭವಮಮ ಶರಣಮ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೫ ॥
ಇತಿ ತವ ನುತಿವರಸತತರತೇರ್ಭವ ಸುಶರಣಮುರು ಸುಖತೀರ್ಥಮುನೇರ್ಭಗವನ್ ।
ಶುಭತಮಕಥಾಶಯ ಪರಮ ಸದೋದಿತ ಜಗದೇಕಕಾರಣ ರಾಮ ರಮಾರಮಣ ॥೧೬ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ನವಮ ಸ್ತೋತ್ರಮ್ ॥

ಸರ್ವದೇವತೆಗಳಿಗೆ ಸ್ವಾಮಿ, ನಿಯಾಮಕ, ಪ್ರಭು, ಪೂರ್ಣಶಕ್ತಿವಂತನಾದ ವಿಷ್ಣುವಿನ "ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇತೇ" ಎಂಬ ಪ್ರಾರ್ಥನೆಯನ್ನೊಳಗೊಂಡ ಹತ್ತನೆಯ ಅಧ್ಯಾಯದಲ್ಲಿ ಶ್ರೀಮಧ್ವರು ನಮ್ಮ ಪರವಾಗಿ ಅತ್ಯುನ್ನತ ಭಗವಂತನಲ್ಲಿ ಭಕ್ತಿಯ ಬೇಡಿಕೆಯನ್ನು ಸಲ್ಲಿಸುತ್ತಾ, ಭಗವಂತನ ಸುಂದರ ಸುಮನೋಹರ ಪಾದ, ನಖ, ಜಂಘ, ಊರು, ನಾಭಿ, ವಕ್ಷಸ್ಥಳಗಳ ದರ್ಶನಾ ಫಲದೊಂದಿಗೆ ಮೋಕ್ಷದಾಯಕವಾದ ಅಪರೋಕ್ಷ ದರ್ಶನ ಫಲವನ್ನೊದಗಿಸುವ ಬೃಹತ್ ಪ್ರಯತ್ನ ಮಾಡಿದ್ದಾರೆ.

ಅವನ ಶ್ರೀಪತಿ ರಪ್ರತಿ ರಧಿ ಕೇಶಾದಿ ಭವಾದೇ ।
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧ ॥

ಸುರ ವಂದ್ಯಾಧಿಪ ಸದ್ವರ ಭರಿತಾ ಶೇಷ ಗುಣಾಲವಮ್

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೨ ॥

ಸಕಲ ಧ್ವಾಂತ ವಿನಾಶಕ ಪರಮಾನಂದ ಸುಧಾಹೋ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೩ ॥

ತ್ರಿಜಗತ್ಪ್ರೋತ ಸದಾರ್ಚಿತ ಚರಣಾ ಶಾಪತಿ ಧಾತೋ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೪ ॥

ತ್ರಿಗುಣಾತೀತ ವಿಧಾರಕ ಪರಿತೋ ದೇಹಿ ಸುಭಕ್ತಿಮ್ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೫ ॥

ಶರಣಂ ಕಾರಣ ಭಾವನ ಭವ ಮೇ ತಾತ ಸದಾಽಲಮ್ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೬ ॥

ಮರಣ ಪ್ರಾಣದ ಪಾಲಕ ಜಗದೀಶಾವ ಸುಭಕ್ತಿಮ್ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೭ ॥

ತರುಣಾ ದಿತ್ಯ ಸವರ್ಣಕ ಚರಣಾಬ್ಜಾ ಮಲ ಕೀರ್ತೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೮ ॥

ಸಲಿಲಪ್ರೋತ್ಥ ಸರಾಗಕ ಮಣಿ ವರ್ಣೋಚ್ಚನ ಖಾದೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೯ ॥

ಖಜತೂಣೀ ನಿಭ ಪಾವನ ವರ ಜಂಘಾಮಿತ ಶಕ್ತೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೦ ॥

ಇಭ ಹಸ್ತಪ್ರಭ ಶೋಭನ ಪರಮೋರು ಸ್ಥರ ಮಾಲೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೧ ॥

ಅಸನೋತ್ಫುಲ್ಲ ಸುಪುಷ್ಪಕ ಸಮವರ್ಣಾ ವರಣಾಂತೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೨ ॥

ಶತ ಮೋದೋದ್ಭವ ಸುಂದರ ವರ ಪದ್ಮೋತ್ಥಿತ ನಾಭೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೩ ॥

ಜಗದಾ ಗೂಹಕ ಪಲ್ಲವ ಸಮ ಕುಕ್ಷೇ ಶರಣಾದೇ ।

ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೪ ॥

ಜಗದಂಬಾ ಮಲ ಸುಂದರ ಗೃಹವಕ್ಷೋ ವರ ಯೋಗಿನ್ ।
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೫ ॥
ದಿತಿಜಾಂತ ಪ್ರದ ಚಕ್ರದರ ಗದಾಯುಗ್ವರ ಬಾಹೋ ।
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೬ ॥
ಪರಮಜ್ಞಾನ ಮಹಾನಿಧಿ ವದನಶ್ರೀ ರಮಣೇಂದೋ ।
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೭ ॥
ನಿಖಿಲಾಘೌ ಘ ವಿನಾಶನ ಪರ ಸೌಖ್ಯ ಪ್ರದ ದೃಷ್ಟೇ
ಕರುಣಾ ಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ ॥ ೧೮ ॥
ಪರಮಾನಂದ ಸುತೀರ್ಥ ಸುಮುನಿ ರಾಜೋ ಹರಿಗಾಥಾಮ್ ।
ಕೃತವಾನ್ ನಿತ್ಯ ಸುಪೂರ್ಣಕ ಪರಮಾನಂದ ಪದೈಷೀ ॥೧೯॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ದಶಮ ಸ್ತೋತ್ರಮ್ ॥

"ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಾದಿ ವಂದಿತಂ". ಸಮಸ್ತ ವಿಶೇಷಗಳುಳ್ಳ ಪೂರ್ಣವಾದ ಜ್ಞಾನಾನಂದಾದಿ ಗುಣಗಳಿಗೆ ಮುಖ್ಯಾಶ್ರಯನಾದ, ಭಕ್ತರಲ್ಲಿ ದಯೆಯಿಂದ ಅತ್ಯಂತ ಪರಿಶುದ್ಧವಾದ ಜ್ಞಾನವನ್ನು ಕೊಡತಕ್ಕ ಸದ್ಗುಣ ಸ್ವರೂಪನ ಪಾದಪದ್ಮಗಳಿಗೆ ವಂದನೆ ಸಲ್ಲಿಸುತ್ತಾ ಆನಂದ ಮೂರ್ತಿ ಶ್ರೀಹರಿಯ ಸ್ತುತಿಯನ್ನು ಭಕ್ತಿಯಿಂದ ಹೇಳುವವರಿಗೆ ಆನಂದಮಯ ಜೀವನ ಇಹದಲ್ಲೂ ಪರದಲ್ಲೂ ಎಂದು ಶ್ರೀಮಧ್ವರು ಆಶ್ವಾಸನೆ ನೀಡಿರುವ ಪುಣ್ಯಕರ, ಶುಭಕರ, ಮಂಗಳಕರ ಆನಂದ ಸ್ತೋತ್ರ ಹನ್ನೊಂದನೆಯ ಅಧ್ಯಾಯ.

ಉದೀರ್ಣ ಮಜರಂ ದಿವ್ಯ ಮಮೃತಸ್ಯಂದ್ಯಧೀಶಿತುಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೧ ॥
ಸರ್ವ ವೇದ ಪದೋದ್ಗೀತ ಮಿಂದಿರಾ ಧಾರ ಮುತ್ತಮಮ್ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೨ ॥
ಸರ್ವ ದೇವಾದಿ ದೇವಸ್ಯ ವಿದಾರಿತಮ ಹತ್ತಮಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೩ ॥
ಉದಾರಮಾದರಾ ನ್ನಿತ್ಯಮನಿಂದ್ಯಂ ಸುಂದರೀ ಪತೇಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೪ ॥

ಇಂದೀವರೋದರ ನಿಭಂ ಸುಪೂರ್ಣಂ ವಾದಿ ಮೋಹದಮ್ ।

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೫ ॥

ದಾತೃ ಸರ್ವಾಮರೈಸ್ವರ್ಯ ವಿಮುಕ್ತ್ಯಾದೇರಹೋ ವರಮ್ ।

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೬ ॥

ದೂರಾ ದ್ದೂರ ತರಂ ಯತ್ ತು ತದೇವಾಂತಿಕ ಮಂತಿಕಾತ್ ।

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೭ ॥

ಪೂರ್ಣ ಸರ್ವ ಗುಣೈಕಾರ್ಣ ಮನಾದ್ಯಂತಂ ಸುರೇಶಿತುಃ ।

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾ ದ್ಯಭಿ ವಂದಿತಮ್ ॥ ೮ ॥

ಆನಂದತೀರ್ಥ ಮುನಿನಾ ಹರೇನಂದ ರೂಪಿಣಃ ।

ಕೃತಂ ಸ್ತೋತ್ರಮಿದಂ ಪುಣ್ಯಂ ಪಠನ್ನಾನಂದತಾಮಿಯಾತ್ ॥ ೯ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶ ಸ್ತೋತ್ರೇಷು ಏಕಾದಶ ಸ್ತೋತ್ರಮ್ ॥

ಶ್ರೀಮಧ್ವರು ಪರಬ್ರಹ್ಮನಾದ ನಾರಾಯಣನು ದೇವದೇವೋತ್ತಮನೆಂದು ಹೇಳಲು ರಚಿಸಿರುವ ಭಕ್ತಜನಪ್ರಿಯವಾದ ದ್ವಾದಶ ಸ್ತೋತ್ರದ ಕಡೆಯ ಅಧ್ಯಾಯದಲ್ಲಿ, ಪರಮಾತ್ಮನು ಅತ್ಯುತ್ಕೃಷ್ಟವಾದ ಆನಂದ ನೀಡುವವನು ಎಂದು ಸ್ಪಷ್ಟಪಡಿಸಿ “ಆನಂದತೀರ್ಥ ಪರಾನಂದ ವರದ” ಎಂದು ಸ್ತುತಿಸಿದ್ದಾರೆ. ಆನಂದದಾಯಕ ಪುರುಷೋತ್ತಮ, ಆನಂದವೆಂಬ ಚಂದ್ರನ ಬೆಳಕನ್ನು ಸುರಿಸುವ, ನಿಷ್ಠೆಯಿಂದ ಸೇವೆ ಮಾಡುವ ಭಕ್ತರ ಮೇಲೆ ಕರುಣೆಯ ಅಮೃತವನ್ನು ಸಿಂಪಡಿಸುವ ಆನಂದದಾಯಕನ ಪ್ರಾರ್ಥನೆ ಹನ್ನೆರಡನೆಯ ಅಧ್ಯಾಯ.

ಆನಂದ ಮುಕುಂದ ಅರವಿಂದ ನಯನ ।

ಆನಂದತೀರ್ಥ ಪರಾನಂದ ವರದ ॥ ೧ ॥

ಸುಂದರಿ ಮಂದಿರ ಗೋವಿಂದ ವಂದೇ ।

ಆನಂದತೀರ್ಥ ಪರಾನಂದ ವರದ ॥ ೨ ॥

ಚಂದ್ರಕ ಮಂದಿರ ನಂದಕ ವಂದೇ ।

ಆನಂದತೀರ್ಥ ಪರಾನಂದ ವರದ ॥ ೩ ॥

ಚಂದ್ರ ಸುರೇಂದ್ರ ಸುವಂದಿತ ವಂದೇ ।

ಆನಂದತೀರ್ಥ ಪರಾನಂದ ವರದ ॥ ೪ ॥

ಮಂದಾರ ಸ್ಯಂದಕ ಸ್ಯಂದನ ವಂದೇ ।

ಆನಂದತೀರ್ಥ ಪರಾನಂದ ವರದ ॥ ೫ ॥

ವೃಂದಾರಕ ವೃಂದ ಸುವಂದಿತ ವಂದೇ ।

ಆನಂದತೀರ್ಥ ಪರಾನಂದ ವರದ ॥ ೬ ॥

ಮಂದಾರ ಸ್ಯಂದಿತ ಮಂದಿರ ವಂದೇ ।

ಆನಂದತೀರ್ಥ ಪರಾನಂದ ವರದ ॥ ೭ ॥

ಮಂದಿರ ಸ್ಯಂದನ ಸ್ಯಂದಕ ವಂದೇ ।

ಆನಂದತೀರ್ಥ ಪರಾನಂದ ವರದ ॥ ೮ ॥

ಇಂದಿರಾ ನಂದಕ ಸುಂದರ ವಂದೇ ।

ಆನಂದತೀರ್ಥ ಪರಾನಂದ ವರದ ॥ ೯ ॥

ಆನಂದ ಚಂದ್ರಿಕಾ ಸ್ಪಂದನ ವಂದೇ । ಆನಂದತೀರ್ಥ ಪರಾನಂದ ವರದ ॥ ೧೦ ॥

॥ ಇತಿ ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರತೇಷು ದ್ವಾದಶಸ್ತೋತ್ರೇಷು ದ್ವಾದಶ ಸ್ತೋತ್ರಮ್ ॥

ಅಮಿತ - ಭೋಧ - ತನು, ಪರಶಕ್ತಿ, ನಿಖಿಲಾಧೀಶ, ಅನಂತಗುಣ, ಪರಮ, ಸುಖವಾನ್, ಸುಖರೂಪೀ, ಪರ - ಭೋಧ - ತನು, ಮೋಕ್ಷದಾಯಕ, ಸೃಷ್ಟಿಸ್ಥಿತಿಲಯಕಾರಿ, ಸಜ್ಜನಪರಿಪಾಲಕ, ನಿಜಪೂರ್ಣಸುಖ, ಸೃಷ್ಟಾದಿಕರ್ತಸ್ವತಂತ್ರ, ಅತಿಮತತಮೋಗಿರಿ ಮೊದಲಾದ ಪದ ಪುಂಜಗಳಿಂದ ಶ್ರೀನಾರಾಯಣನನ್ನು ಶ್ರೀಮಧ್ವರು ದರ್ಶನಾನಂದ ಭಾಗ್ಯವನ್ನು ಪಡೆದು ವರ್ಣಿಸಿ ಸ್ತುತಿಸಿದ್ದಾರೆ. ಶ್ರೀಹರಿ ಗುಣಪರಿಪೂರ್ಣ, ದೋಷವಿದೂರ.

ಶೃಣುತಾಮಲ ಸತ್ಯವಚಃ ಪರಮಂ ಶಪಥೇರಿತ ಮುಚ್ಚ್ರಿತಬಾಹುಯುಗಮ್ ।

ನ ಹರೇಃ ಪರಮೋ ನ ಹರೇಃ ಸಧೃಶಃ ಪರಮಃ ಸತುಸರ್ವಚಿದಾತ್ಮಗಣಾತ್ ॥

"ವಂದೇ ವಂದ್ಯಂ .." ಎಂದು ಪ್ರಾರಂಭವಾಗಿ "ಪರಾನಂದ ವರದ" ಎಂದು ಕೊನೆಗೊಳ್ಳುವ ದ್ವಾದಶ ಸ್ತೋತ್ರದ ಮೊದಲನೆಯ ಮತ್ತು ಕೊನೆಯ ಅಕ್ಷರಗಳು 'ವ' ಮತ್ತು 'ದ'. 'ವ' ಎಂಬುದು ಜ್ಞಾನ, ಬುದ್ಧಿವಂತಿಕೆ, ಅಮೃತ ಇತ್ಯಾದಿಗಳನು ಪ್ರತಿನಿಧಿಸಿದರೆ, 'ದ' ಎಂದರೆ ಕೊಡುವುದು ಎಂಬ ಅರ್ಥ ನೀಡುತ್ತದೆ. ಹೀಗೆ ಭಕ್ತಿಯಿಂದ ಪಠಿಸುವವರಿಗೆ ಈ ಸ್ತೋತ್ರವು ಬುದ್ಧಿವಂತಿಕೆ ಮತ್ತು ಸಂತೋಷವನ್ನು ನೀಡುತ್ತದೆ ಮತ್ತು ಎಲ್ಲ ವಿಷಗಳನ್ನು ಪರಿಹರಿಸುತ್ತದೆ.

ವಿಮಲೈಃ ಶ್ರುತಿಶಾಣ ನಿಶಾತತಮೈಃ ಸುಮನೋ ಸಿಭಿರಾಶು ನಿಹತ್ಯ ಧೃಡಮ್ ।

ಬಲಿಮಂ ನಿಜವೈರಿಣಮಾತ್ಮತಮೋ ಭದಮೀಶಮನಂತಮುಪಾಸ್ವ ಹರಿಮ್ ॥

ನಮ್ಮಲ್ಲಿ ಹೆಪ್ಪುಗಟ್ಟಿರುವ ಅಜ್ಞಾನವೆಂಬ ವಿಷವನ್ನು ನಿರ್ಮೂಲಿಸಿ, ಅಂತಃಶುದ್ಧಿ, ಭಕ್ತಿ, ಜ್ಞಾನ, ವೈರಾಗ್ಯಗಳ ಮಾರ್ಗದಲ್ಲಿ ಸಾತ್ವಿಕವಾಗಿ ಬಾಳಿ, ಹರಿ ಸಾಕ್ಷಾತ್ಕಾರ ಸಾಧನೆಯಲ್ಲಿ ನಮ್ಮ ಕಿರುಪ್ರಯತ್ನ ಸಹಕಾರಿಯಾಗಲಿ. ಹರಿಯೇ ಸರ್ವೋತ್ತಮ, ಹರಿಯೇ ಸರ್ವೇಶ್ವರ, ಹರಿಮಯವೀ ಜಗವೆಲ್ಲಾ ಎಂಬುದನ್ನು ತಿಳಿದು,

ಶ್ರೀಹರಿಯ ಚರಿತೆಯ ಶ್ರವಣದಲ್ಲಿ,
ಶ್ರೀಹರಿಯ ಕೀರ್ತನೆಯಲ್ಲಿ,
ಶ್ರೀಹರಿಯ ಸ್ಮರಣೆಯಲ್ಲಿ,
ಶ್ರೀಹರಿಯ ಪಾದಸೇವೆಯಲ್ಲಿ,
ಶ್ರೀಹರಿಯ ಅರ್ಚನೆಯಲ್ಲಿ,
ಶ್ರೀಹರಿಯ ವಂದನೆಯಲ್ಲಿ,
ಶ್ರೀಹರಿಯ ದಾಸ್ಯದಲ್ಲಿ,
ಶ್ರೀಹರಿಯ ಸಖ್ಯದಲ್ಲಿ,
ಶ್ರೀಹರಿಯ ಶರಣಾಗತಿಯಲ್ಲಿ,
ನಮ್ಮ ಶೇಷ ಜೀವನ ಸಾಗಲಿ ಎಂದು ಶ್ರೀಹರಿಯನ್ನು ಪ್ರಾರ್ಥಿಸುತ್ತಾ,
ಅಕ್ಷಯಂ ಕರ್ಮ ಯಸ್ಮಿಂಪರೇ ಸ್ವರ್ಪಿತಂ ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ ।
ಅಕ್ಷರೋ ಯೋಽಜರಃ ಸರ್ವದೈವಾಮೃತಃ ಕುಕ್ಷಿಗಂ ಯಸ್ಯ ವಿಶ್ವಂ ಸದಾ ಔದಿಕಮ್ ॥
ಪ್ರೀಣಯಾಮೋ ವಾಸುದೇವಂ, ದೇವತಾ ಮಂಡಲಾ ಖಂಡ ಮಂಡನಮ್ ।

**॥ ಶ್ರೀಕೃಷ್ಣಾರ್ಪಣಮಸ್ತು ॥**